(ಆ) ಮೇಲುಕೋಟೆ ಕಾಡು ಹಸುವಿನ ಕಾವಲು ಕಾಡುಗಳು ಬಹಳ ಹಳೆಯ ಅರಣ್ಯಗಳಾಗಿದ್ದು, ಇಲ್ಲಿ ಶ್ರೀಗಂಧದ ಬೆಳೆಗೆ ಅನುಕೂಲಕರವಾದ ವಾತಾವರಣ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಮೇಲ್ಕಂಡ ಅರಣ್ಯಗಳಲ್ಲಿ ಶ್ರೀಗಂಧ ಬೆಳೆಯುವ ಕಾರ್ಯಕ್ರಮವನ್ನು ಸರ್ಕಾರವವರು ಕೈಗೊಳ್ಳುವರೇ ?

(ಈ) ಸದರಿ ಅರಣ್ಯಗಳಲ್ಲಿ ನೀಲಗಿರಿ ಬೆಳೆಯುವುದನ್ನು ನಿಲ್ಲಿಸಿ ಬೇರೆ ರೀತಿಯ ಅರಣ್ಯ ವೃಕ್ಷಗಳನ್ನು ಬೆಳೆಯುವುದಕ್ಕೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜೀವಿಜಯ(ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಸುಮಾರು ೨೩೧೦ ಹೆಕ್ಟೇರ್.

(ಆ) ಶ್ರೀಗಂಧ ಬೆಳೆಯಲು ಈ ಕಾಡುಗಳು ಅಷ್ಟು ಅನುಕೂಲಕರವಾಗಿಲ್ಲ.

(ಇ) ಬರೀ ಶ್ರೀಗಂಧದ ಮರವನ್ನು ಬೆಳೆಸುವ ಯೋಜನೆ ಇಲ್ಲ. ಆದರೆ ಮಿಶ್ರ ಜಾತಿ ಗಿಡಗಳನ್ನು ಬೆಳೆಸಲು ಗುಂಡಿಗಳನ್ನು ತೆಗೆದು ಆ ಗುಂಡಿಗಳ ದಡಗಳಲ್ಲಿ ಮತ್ತು ಕಾಡಿನ ಪೊದೆಗಳಲ್ಲಿ ಶ್ರೀಗಂಧದ ಬೀಜಗಳನ್ನು ಹಾಕಿ ಬೆಳೆಸಲಾಗುತ್ತಿದೆ.

(ಈ) ಮೇಲ್ಕಂಡ ಅರಣ್ಯಗಳಲ್ಲಿ ಸಾಮಾಜಿಕ ಅರಣ್ಯಾಭಿವೃದ್ಧಿ ಯೋಜನೆಯಲ್ಲಿ ಮಿಶ್ರಜಾತಿಯ ಗಿಡಗಳನ್ನು ಬೆಳೆಸಲಾಗುತ್ತಿದೆ. ಅಂದರೆ ಬೇವು, ಹುಣಸೆ, ಸೀಮಾತಂಗಡಿ, ಜಾಲಿ ಮರಗಳ ಜೊತೆಗೆ ನೀಲಗಿರಿ ಮರಗಳನ್ನು ಬೆಳೆಸಲಾಗುತ್ತದೆ, ಬರೆ ನೀಲಗಿರಿ ಒಂದನ್ನೇ ಬೆಳೆಸುತ್ತಿಲ್ಲ.

ಭದ್ರಾ ಮೇಲ್ದಂಡೆ ಯೋಜನೆಯಿಂದ ನೀರಾವರಿಯಾಗುವ ಪ್ರದೇಶ

೬೨೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫-೮೬ನೇ ಸಾಲಿನ ಆಯವ್ಯಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಒದಗಿಸಿರುವ ಹಣವೆಷ್ಟು ?

(ಆ) ಸದರಿ ಯೋಜನೆಯಿಂದ ನೀರನ್ನು ಒದಗಿಸಲಾಗುವ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಇಲ್ಲ.

(ಆ) ೨,೫೦,೦೦೦ ಎಕರೆಗಳು

ವಿಜಾಪುರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯಧನ ಪಡೆದ ಸಂಸ್ಥೆಗಳ ಬಗ್ಗೆ

೬೮೧. ಶ್ರೀ ಜಿ. ಎಸ್. ಬಾಗಲಕೋಟಿ.—(ಜಮಖಂಡಿ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ವಿಜಾಪುರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯ ಪಡೆದ ಸಂಸ್ಥೆಗಳೆಷ್ಟು ?

(ಆ) ಇಂಥ ಬಹಳಷ್ಟು ಸಂಸ್ಥೆಗಳಲ್ಲಿ ಹಣದ ದುರುಪಯೋಗವಾಗಿದ್ದು ನಿಜವೇ ?